ಬರೆಯುತ್ತಾರೆ.

ಈ ಅವಧಿಯಲ್ಲಿ ಅವರು, ನಿಮ್ಮ ಮೇಸ್ತ್ರು ಯಾರು, ಎಲ್ಲಿಗೆ ಹೋಗಿದ್ದಾರೆ, ಅವರೇನು ಮಾಡುತ್ತಾರೆ, ಪಾಠವನ್ನು ಹೇಗೆ ಬೋಧಿಸುತ್ತಾರೆ ಎಂದು ಕೇಳಲಿಲ್ಲ.

ಸ್ವಲ್ಪ ಸಮಯದ ನಂತರ ಮೇಸ್ತ್ರು ಬರುತ್ತಾರೆ.

ಮಕ್ಕಳು ಶಿಸ್ತಿನಿಂದ ಕೂತಿರುವುದನ್ನು ಹಾಗೂ ಮೇಜಿನ ಬಳಿ ಶಿಕ್ಷಣ ನಿರೀಕ್ಷಕರು ನಿಂತಿರುವುದನ್ನು ಮೇಸ್ತ್ರು ನೋಡುತ್ತಾರೆ. ಬಸಂತರಾಯ್ ಮೇಸ್ತ್ರು ಹೆದರುತ್ತಾರೆ. ಇವನೆಲ್ಲಿಂದ ಬಂದು ವಕ್ಕರಿಸಿದ? ಏನಾದರು ಹೇಳಿದರೆ, ಕೇಳಲೇ ಬೇಕಾಗುತ್ತದೆ ಎಂದು ಮನಸ್ಸಿನಲ್ಲಿ ನಿರ್ಧರಿಸುತ್ತಾರೆ.

ಮೇಸ್ತ್ರನ್ನು ನೋಡಿ ಲಾಮೂ ಭಾಯಿ, 'ಬನ್ನಿ!' ಎನ್ನುತ್ತಾರೆ.

ಮೇಸ್ತ್ರಿಗೆ ಅವರ 'ಬನ್ನಿ' ಉಚ್ಚಾರಣೆಯನ್ನು ಕೇಳಿ, ನಿರೀಕ್ಷಕರು ತಮ್ಮನ್ನು ಅಪಹಾಸ್ಯ ಮಾಡುತ್ತಿದ್ದಾರೆಂದು ಅನ್ನಿಸುತ್ತದೆ. ಅವರ ತುಟಿಗಳು ಆವೇಶದಿಂದಾಗಿ ಕಂಪಿಸುತ್ತವೆ. ಮೇಸ್ತ್ರು ಮುಖದಲ್ಲಾದ ಪರಿವರ್ತನೆಯನ್ನು ಲಾಮೂ ಭಾಯಿ ಗಮನಿಸುತ್ತಾರೆ.

ಮೇಸ್ತ್ರು ಬಸಂತರಾಯ್ ಒಳಗೆ ಬಂದು ಲಾಮೂ ಭಾಯಿಯವರ ಬಳಿ ನಿಲ್ಲುತ್ತಾರೆ. ಲಾಮೂ ಭಾಯಿ ಅವರ ಕಣ್ಣುಗಳಲ್ಲಿ ನೋಡುತ್ತಾ, 'ಕೂತುಕೊಳ್ಳಿ' ಎನ್ನುತ್ತಾರೆ.

ಮೇಸ್ತ್ರು ಕಂಪಿಸುತ್ತಾರೆ. ಅವರ ಕಂಪನ ಅವರ ಕಣ್ಣುಗಳಲ್ಲಿಯ ಉರಿಯನ್ನು ದುಪ್ಪಟ್ಟು ಮಾಡುತ್ತದೆ. ಅವರ ಕಣ್ಣುಗಳು ಕೆಂಪಗಾಗಿವೆ, ಕಣ್ಣುಗಳು ಇನ್ನೇನು ಬೆಂಕಿಯನ್ನು ಕಾರಲಿವೆ ಎಂದು ತೋರುತ್ತದೆ.

ನಿರೀಕ್ಷಕರಾದ ಲಾಮೂ ಭಾಯಿ ಮತ್ತೆ ಮುಗುಳ್ನಕ್ಕು ಸಾಧ್ಯವಾದಷ್ಟೂ ಮಧುರವಾಗಿ ಹೇಳುತ್ತಾರೆ, 'ಕೂತುಕೊಳ್ಳಿ...'

ಮೇಸ್ತ್ರು ವಿಧಿಯಿಲ್ಲದೆ ಕೂರುತ್ತಾರೆ, ಮತ್ತೆ ಏಳುತ್ತಾರೆ. ಅವರ ತೀಕ್ಷ್ಣ ದೃಷ್ಟಿ ನಿರೀಕ್ಷಕರನ್ನೇ ನೋಡುತ್ತಿದೆ. ಅವರ ತುಟಿಗಳು ಕಂಪಿಸುತ್ತಿವೆ. ಕೈಗಳು ಪರಸ್ಪರ ಹೊಸೆದುಕೊಳ್ಳುತ್ತಿವೆ.

ಲಾಮೂ ಭಾಯಿ ಮಕ್ಕಳನ್ನು ತಮ್ಮ ಮಧುರ ಮಾತುಗಳಿಂದ ಆಕರ್ಷಿಸುತ್ತಿದ್ದಾರೆ. ಮೇಸ್ತ್ರು ಬಸಂತರಾಯ್ ಚಿಂತಾಕ್ರಾಂತರಾಗುತ್ತಾರೆ.

'ಈಗ ಮಕ್ಕಳಿಗೆ ರಜ ಕೊಡೋಣವೇ?' ನಿರೀಕ್ಷಕರು ಮೇಸ್ತ್ರನ್ನು ಕೇಳುತ್ತಾರೆ.

'ನಿಮಗೆ ಉಚಿತವೆಂದು ಅನ್ನಿಸಿದಂತೆ ಮಾಡಿ...' ಮೇಸ್ತ್ರು ನಮ್ರತೆಯಿಂದ ಹೇಳುತ್ತಾರೆ. ಆದರೂ ಅವರ ಒರಟುತನ ಮರೆಮಾಚುವುದಿಲ್ಲ.

'ರಜವನ್ನೇ ಕೊಡೋಣ. ಮಕ್ಕಳು ಆಡಿಕೊಳ್ಳಲಿ.'

'ಸರಿ.'

ಮಕ್ಕಳು ಖುಷಿಯಿಂದ ಕಿರುಚುತ್ತಾ ಓಡಿ ಹೋಗುತ್ತಾರೆ.

ಲಾಮೂ ಭಾಯಿ ಮತ್ತು ಬಸಂತರಾಯ್ ಮೇಸ್ತ್ರು ಮಾತ್ರ ಉಳಿಯುತ್ತಾರೆ.

ಲಾಮೂ ಭಾಯಿ ಮೌನವಹಿಸುತ್ತಾರೆ. ಬಸಂತರಾಯ್ ಮೇಸ್ತ್ರು ತಲೆತಗ್ಗಿಸಿ ಕೂತಿದ್ದಾರೆ. ಕಡೆಗೆ ಮೇಸ್ತ್ರು ಮಾತನಾಡುತ್ತಾರೆ, 'ಸಾರ್! ನೀವು ಚಹಾವನ್ನಂತೂ ಕುಡಿಯುತ್ತೀರಲ್ವ?'

'ಇಲ್ಲ-ಇಲ್ಲ, ಈ ತೊಂದರೆ ಏಕೆ?'

'ಆದರೂ ಏನಾದ್ರು ಸ್ವಲ್ಪ...'

'ಏನೂ ಬೇಡ. ನಾವಿಬ್ಬರು ಒಟ್ಟಿಗೆ ಊಟ ಮಾಡೋಣ.'

'ಹಾಗಾದ್ರೆ ಸಾರ್, ಮನೆಗೆ ಹೋಗಬೇಕಾಗುತ್ತೆ... ಕೈಯಿಂದ ಅಡುಗೆ ಸಹ ಮಾಡಬೇಕಾಗುತ್ತೆ.'

'ಬೇಡ, ಇದರ ಅಗತ್ಯವಿಲ್ಲ.'

'ಮತ್ತೇನು ತಿನ್ನೀರಾ?' ಬಸಂತ್ ರಾಯ್‌ರ ಸಿಟ್ಟು ಕ್ರಮೇಣ ದೂರವಾಗುತ್ತಿತ್ತು.

'ನೀವಿಲ್ಲಿ ಒಂಟಿಯಾಗಿರುತ್ತೀರ ಎಂಬುವುದು ನನಗೆ ಗೊತ್ತಿದೆ. ಹೀಗಾಗಿ ಮನೆಯಿಂದ ಉಪ್ಪಿಟ್ಟು, ಪೂರಿ ತಿಂಡಿ ತಂದಿದ್ದೇನೆ.'

'ನೀವು ಹೀಗೆ ಮಾಡಿದ್ದು ಸರಿಯಲ್ಲ.'

'ಇದರಲ್ಲಿ ತಪ್ಪೇನಿದೆ. ನಾನು ನಿಮ್ಮ ಸಾಹೇಬ ಎಂಬುದನ್ನು ಮರೆತುಬಿಡಿ. ಇಲ್ನೋಡಿ, ನಾನೆಷ್ಟು ತಂದಿದ್ದೇನೆ ಎಂಬುದನ್ನು ನೋಡಿ, ನಮ್ಮಿಬ್ಬರ ಹಸಿವು ಮಾಯವಾಗುವುದು.'

ಬಸಂತರಾಯ್ ಮೇಸ್ತ್ರು ಲಾಮೂ ಭಾಯಿಯವರನ್ನೇ ನೋಡುತ್ತಾ ನಿಂತರು. ಅವರ ಮುಖದಲ್ಲಿದ್ದ ಭಾವನೆಗಳು ಬದಲಾಗುತ್ತಿದ್ದವು. ಅವರ ಮನದೊಳಗಿನ ಬೆಂಕಿ ಆರಿತ್ತು.

'ನೋಡಿ, ಪೂರಿ ಮತ್ತು ಪಲ್ಯವಿದೆ. ನೀವು ಮೊಸರು ತರಲು ಸಾಧ್ಯವಾದರೆ... '